ಆ ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

ಇವರ ನಿವಾಸಕ್ಕೆ ರಾಜರಾಜೇಶ್ವರಿನಗರ ಪೊಲೀಸ್ ಠಾಣೆಯಿಂದ ಪಾಯಿಂಟ್ ಪುಸ್ತಕಗಳನ್ನು ಇಟ್ಟು, ಗಸ್ತು ಸಿಬ್ಬಂದಿಗಳು ಹಾಗೂ ಚೀತಾ ಹೊಯ್ಸಳ ವಾಹನಗಳು ಮತ್ತು ಗಸ್ತಿನ ಅಧಿಕಾರಿಗಳು ಹಗಲು ಮತ್ತು ರಾತ್ರಿಯ ವೇಳೆಯಲ್ಲಿ ಆಗಿಂದಾಗ್ಗೆ ಭೇಟಿ ನೀಡಿ ಚೆಕ್‌ಮಾಡಿ ರಕ್ಷಣೆ ನೀಡುತ್ತಿರುತ್ತಾರೆ ಹಾಗೂ ಇವರು ವಾಸ ಮಾಡುವ ನಿವಾಸದ ಬಳಿ ನಿಗಾ ಇಡಲಾಗಿದೆ.

ಇ ಇತ್ತೀಚೆಗೆ ಬೆಂಗಳೂರಿನಲ್ಲಿ ಉಗ್ರಗಾಮಿಗಳು ವಿಜ್ಞಾನಿಗಳ ಮೇಲೆ ಆಕ್ರಮಣ ಮಾಡಿರುವ ಪ್ರಕರಣ ನಡೆದಿರುವ ಹಿನ್ನೆಲೆಯಲ್ಲಿ ಇವರಿಗೆ ರಕ್ಷಣೆ ನೀಡಲು ಸರ್ಕಾರ ಕ್ರಮಕೈಗೊಳ್ಳುವುದೇ?

ಮೇಲಿನಂತೆ ಕೈಗೊಂಡ ಕ್ರಮಗಳನ್ನು ಮುಂದುವರೆಸಲಾಗುವುದು.

**158 ಶ್ರೀ. ಬಿ.ಝಡ್.ಜಮೀರ್ ಅಹಮದ್ ಖಾನ್**
**ಮಾನ್ಯ ಮುಖ್ಯಮಂತ್ರಿಯವರು**

ಅ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ

ಆ ಹಾಗಿದ್ದಲ್ಲಿ, ಈ ರಸ್ತೆಗಳನ್ನು ದುರಸ್ಥಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದು;

ಕ್ರಮ ಕೈಗೊಳ್ಳಲಾಗುತ್ತಿದೆ. ಈ ಬಗ್ಗೆ ಒಟ್ಟು 9 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಅದರಲ್ಲಿ 5 ಕಾಮಗಾರಿಗಳು ಮುಕ್ತಾಯಗೊಂಡಿದೆ. 2 ಕಾಮಗಾರಿಗಳು ಪ್ರಾರಂಭಿಕ ಹಂತದಲ್ಲಿರುತ್ತದೆ ಮತ್ತು 2 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ಇ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ರಸ್ತೆಗಳ ದುರಸ್ಥಿಗಾಗಿ ಸರ್ಕಾರ ಅನುದಾನವನ್ನು ಬಿಡುಗಡೆ ಮಾಡಿದೆಯೇ;

ಹೌದು.

ಈ ಹಾಗಿದ್ದಲ್ಲಿ ಎಷ್ಟು ಪ್ರಮಾಣದಲ್ಲಿ ಅನುದಾನವನ್ನು ಬಿಡುಗಡೆ ಮಾಡಿದೆ; (ವಿವರಗಳನ್ನು ನೀಡುವುದು)?

ರೂ.311.57 ಲಕ್ಷಗಳನ್ನು ಬಿಡುಗಡೆ ಮಾಡಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಅನುಬಂಧ

| ಕ್ರ ಸಂ. | ವಾರ್ಡ್ ಸಂಖ್ಯೆ | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಕಾಮಗಾರಿ ಹಂತ |
|---|---|---|---|---|
| 1 | 46 | ಚಾಮರಾಜಪೇಟೆ 2ನೇ ಮುಖ್ಯ ರಸ್ತೆ 3ನೇ ಅಡ್ಡರಸ್ತೆಯಿಂದ ಪಂಪಮಹಾಕವಿ ರಸ್ತೆವರೆಗೆ ಡಾಂಬರೀಕರಣ ಒದಗಿಸುವಕಾಮಗಾರಿ | 49.20 | ಪ್ರಾರಂಭ ಹಂತ |
| 2 | 46 | ಚಾಮರಾಜಪೇಟೆ 4ನೇ ಮುಖ್ಯ ರಸ್ತೇ 7ನೇ ಅಡ್ಡರಸ್ತೆಯಿಂದ 3ನೇ ಅಡ್ಡರಸ್ತೆವರೆಗೆ ಡಾಂಬರೀಕರಣ ಒದಗಿಸುವ ಕಾಮಗಾರಿ | 48.40 | ಪ್ರಾರಂಭ ಹಂತ |
| 3 | 46 | ಚಾಮರಾಜಪೇಟೆ 3ನೇ ಮುಖ್ಯ ರಸ್ತೆ 7ನೇ ಅಡ್ಡರಸ್ತೆಯಿಂದ 3ನೇ ಅಡ್ಡರಸ್ತೆವರೆಗೆ ಡಾಂಬರೀಕರಣ ಒದಗಿಸುವ ಕಾಮಗಾರಿ | 49.10 | ಕಾಮಗಾರಿ ಪ್ರಗತಿಯಲ್ಲಿದೆ |
| 4 | 46 | ಚಾಮರಾಜಪೇಟೆ 8ನೇ ಅಡ್ಡರಸ್ತೆ 1ನೇ ಮತ್ತು 5ನೇ ಮುಖ್ಯರಸ್ತೆ ಮಧ್ಯೆ ಡಾಂಬರೀಕರಣ ಒದಗಿಸುವ ಕಾಮಗಾರಿ | 15.83 | ಮುಕ್ತಾಯ ಗೊಂಡಿದೆ |
| 5 | 46 | ಚಾಮರಾಜಪೇಟೆ 4ನೇ ಮುಖ್ಯ ರಸ್ತೆ ಪಂಪ ಮಹಾಕವಿ ರಸ್ತೆ ಮಧ್ಯೆ 9ನೇ ಅಡ್ಡರಸ್ತೆವರೆಗೆ ಡಾಂಬರೀಕರಣ ಒದಗಿಸುವ ಕಾಮಗಾರಿ | 30.00 | ಮುಕ್ತಾಯ ಗೊಂಡಿದೆ |
| 6 | 46 | ಚಾಮರಾಜಪೇಟೆ 1ನೇ, 2ನೇ ಮತ್ತು 4ನೇ ಅಡ್ಡರಸ್ತೆ 1ನೇ ಮುಖ್ಯ ಮತ್ತು 5ನೇ ಮುಖ್ಯ ರಸ್ತೆ ಮಧ್ಯೆ ಡಾಂಬರೀಕರಣ ಒದಗಿಸುವ ಕಾಮಗಾಗಿ | 20.12 | ಮುಕ್ತಾಯ ಗೊಂಡಿದೆ |
| 7 | 46 | ಚಾಮರಾಜಪೇಟೆ 2ನೇ ಮುಖ್ಯರಸ್ತೆ. | 30.00 | ಮುಕ್ತಾಯಗೆ |

| | | | | |
|---|---|---|---|---|
| | | 2ನೇ ಅಡ್ಡರಸ್ತೆ ಮತ್ತು 9ನೇ ಅಡ್ಡರಸ್ತೆ ಮಧ್ಯೆ ಭಾಗಕ್ಕೆ ಡಾಂಬರೀಕರಣ ಒದಗಿಸುವ ಕಾಮಗಾರಿ | | ಮಾಡಿದೆ |
| 8 | 30 | ಜಟಕಾ ಬಂಡಿ ರಸ್ತೆ ಮತ್ತು ಸುತ್ತಮುತ್ತಲ ಪ್ರದೇಶಕ್ಕೆ ಡಾಂಬರೀಕರಣ ಒದಗಿಸುವ ಕಾಮಗಾರಿ | 49.00 | ಕಾಮಗಾರಿ ಪ್ರಗತಿಯಲ್ಲಿದೆ |
| 9 | 30 | ಮೈಸೂರು ರಸ್ತೆಯಿಂದ ಪೋಲೀಸ್ ವಸತಿ ಗೃಹ ಪಕ್ಕದ ಭಾಗಕ್ಕೆ ಡಾಂಬರೀಕರಣ ಒದಗಿಸುವ ಕಾಮಗಾರಿ | 19.92 | ಮುಕ್ತಾಯ ಗೊಂಡಿದೆ |

**198 ಶ್ರೀ. ಸುರೇಶ್ ಬಾಬು ಸಿ.ಬಿ.**

**ಮಾನ್ಯ ಪೌರಾಡಳಿತ ಸಚಿವರು**

1. ಚಿಕ್ಕನಾಯಕನಹಳ್ಳಿ ಪುರಸಭೆಯಲ್ಲಿ ವಿವಿಧ ಹುದ್ದೆಗಳು ಬಹಳ ದಿನಗಳಿಂದ ಖಾಲಿ ಇದ್ದು, ಪಟ್ಟಣದ ನೈರ್ಮಲ್ಯದ ಕೆಲಸ ನಿರ್ವಹಿಸಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**ಹೌದು**

2. ಹಾಗಿದ್ದಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ?

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಿಬ್ಬಂದಿ ಕೊರತೆ ಇದೆ. ಸ್ಥಳೀಯ ಸಂಸ್ಥೆಗಳ ಖಾಲಿ ಇರುವ ಸ್ಥಾನಗಳನ್ನು ಈಗಿರುವ ಸಿಬ್ಬಂದಿಗಳಿಂದ ಕೆಲಸ ನಿರ್ವಹಿಸಲು ಕ್ರಮ ವಹಿಸಲಾಗಿದೆ.

3. **ಇದುವರೆಗೆ ಕ್ರಮ ಕೈಗೊಳ್ಳದಿರಲು ಕಾರಣಗಳೇನು; ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?**

**ಸರ್ಕಾರದ ಆದೇಶ ಸಂಖ್ಯೆ: ನಅಇ 102 ಟಿಎಂಇ 2008 ದಿನಾಂಕ:29–11–2008ರನ್ವಯ ನಗರ ಸ್ಥಳೀಯ ಸಂಸ್ಥೆಗಳ ವಿವಿಧ ವೃಂದಗಳ ಒಟ್ಟು 849 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.**